**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>**
**<u>ಸಿ ಸಿ ನಂಃ23/2022</u>**

| | | |
|---|---|---|
| ಸಾಕ್ಷಿಯ ಹೆಸರು | ಃ ಮಲ್ಲಿಕಾರ್ಜುನ | ಸಿ.ಡಬ್ಲ್ಯು 16 |
| ತಂದೆಯ ಹೆಸರು | ಃ ಜನಾರ್ಧನ | ಪಿ.ಡಬ್ಲ್ಯು 6 |
| ವಯಸ್ಸು | ಃ 47 ವರ್ಷ | |
| ಉದ್ಯೋಗ | ಃ ಮುಖ್ಯ ಪೇದೆ | |
| ವಾಸ ಸ್ಥಳ | ಃ ಕಡೂರು ಠಾಣೆ | |

**ದಿನಾಂಕಃ 28-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-</u>**

ನಾನು2017 ರಿಂದ 2022 ರ ಮಧ್ಯೆದಲ್ಲಿ ತರೀಕೆರೆಯಲ್ಲಿ ಮುಖ್ಯ ಪೇದೆ ಎಂದು ಕೆಲಸ ಮಾಡಿದ್ದೇನೆ.

ದಿನಾಂಕ 16-06-2021 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ನೀಡಿದ ಗಣಕೀಕೃತ ಫಿರ್ಯಾದಿಯನ್ನು ಸ್ವೀಕರಿಸಿ ಠಾಣಾ ನಂಬರ 136/2021 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆ. ಅದೇ ದಿನ ಮಧ್ಯಾಹ್ನ 1.00 ರಿಂದ 12.00 ಗಂಟೆಯವರೆಗೆ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-7 ಮತ್ತು 8 ರವರ ಸಮಕ್ಷಮ ಸ್ಥಳ ತನಿಖೆಯನ್ನು ಮಾಡಿ ಪಂಚನಾಮೆ ಬರೆದು ಸಾಕ್ಷಿದಾರರ ಸಹಿಗಳನ್ನು ಪಡೆದುಕೊಂಡಿರುತ್ತೇನೆ. ಆ ಸಮಯಕ್ಕೆ ಫೋಟೊಗಳನ್ನು ಕೂಡಾ ತೆಗೆಸಿದ್ದೇನೆ. ಅದೇ ದಿನ ಮಧ್ಯಾಹ್ನ 3.30 ರಿಂದ 4.30 ರ ಮಧ್ಯೆದಲ್ಲಿ ಠಾಣೆಯಲ್ಲಿದ್ದ ಚಾಸಾ-1 ರವರು ನೋಡಿ ಗುರುತಿಸಿದ ವಾಹನವನ್ನು ಪಂಚನಾಮೆಯ ಮೂಲಕ ಮೇಲೆ ಹೇಳಿದ ಸಾಕ್ಷಿದಾರರ ಸಮಕ್ಷಮ ಅಮಾನತಪಡಿಸಿಕೊಂಡಿದ್ದೇನೆ, ಭಾವ ಚಿತ್ರ ತೆಗೆಸಿದ್ದೇನೆ. ಮುಂದಿನ ತನಿಖೆಯನ್ನು ಚಾಸಾ-18 ರವರಿಗೆ ವಹಿಸಿದ್ದೇನೆ. ವರದಿಯನ್ನು ಈಗಾಗಲೇ ನಿಪಿ.2 ಎಂದು ಗೂುತಿಸಲಾಗಿದ್ದು , ಸಹಿಯನ್ನು ನಿಪಿ.2 ಬಿ ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ.8 ಎಂದು ಗುರುತಿಸಲಾಯಿತು. ಸ್ಥಳ ಮಹಜರನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ.3 ಸಿ ಎಂದು ಗುರುತಿಸಲಾಯಿತು. ಅಮಾನತ ಪಂಚನಾಮೆಯನ್ನು ಈಗಾಗಲೇ ನಿಪಿ.7 ಎಂದು ಗುರುತಿಸಲಾಗಿದ್ದು, ಸಹಿಯನ್ನು ನಿಪಿ.7 ಸಿ ಎಂದು ಗುರುತಿಸಲಾಯಿತು. ಫೋಟೊಗಳನ್ನು ಈಗಾಗಲೇ ಕ್ರಮವಾಗಿ ನಿಪಿ.4 ಮತ್ತು 5 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಪಿರ್ಯಾದಿಯನ್ನು ಸಲ್ಲಿಸಲು ನಾಲ್ಕು ದಿನಗಳ ವಿಳಂಬ ಇದೆ ಎಂದರೆ ಸರಿ. ಸ್ಥಳದಿಂದ ನಾನು ವಾಹನವನ್ನು ಅಮಾನತಪಡಿಸಿಕೊಂಡಿಲ್ಲ. ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ, ಸ್ಥಳ ಪಂಚನಾಮೆ ಮಾಡಿಲ್ಲ ಮತ್ತು ಜಿಪ್ತಿ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ :</u>** ಇಲ್ಲ:

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ***

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***